# ನಾರಾಯಣ ಎನ್ನಬಾರದೆ ನಿಮ್ಮ ನಾಲಿಗೆಯೊಳು

1. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchhu Rayaru.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi
3. **Note:** Lyrics in both the above references are same and the singer has followed these wordings.

ರಾಗ: ಬಿಲಹರಿ ತಾಳ: ಆದಿ

ನಾರಾಯಣ ಎನ್ನಬಾರದೆ ನಿಮ್ಮ
ನಾಲಿಗೆಯೊಳು ಮುಳ್ಳು ಮುರಿದಿಹುದೆ || ಪ ||

ವಾರಣಾಸಿಗೆ ಪೋಗಿ ದೂರ ಬಳಲಲೇಕೆ
ನೀರ ಕಾವಡಿಯನು ಪೊತ್ತು ತಿರುಗಲೇಕೆ
ಊರೂರು ತಪ್ಪದೆ ದೇಶಾಂತರವೇಕೆ
ದಾರಿಗೆ ಸಾಧನವಲ್ಲವೆ ಹರಿ ನಾಮ || 1 ||

ನಿತ್ಯ ಉಪವಾಸವಿದ್ದು ಹಸಿದು ಬಳಲಲೇಕೆ
ಮತ್ತೆ ಚಳಿಯೊಳು ಗಂಗೆ ಮುಳುಗಲೇಕೆ
ಹಸ್ತವ ಪಿಡಿದು ಮಾಡುವ ಜಪ-ತಪವೇಕೆ
ಮುಕ್ತಿಗೆ ಸಾಧನವಲ್ಲವೆ ಹರಿ ನಾಮ || 2 ||

ಸತಿ ಸುತರನು ಬಿಟ್ಟು ಯತಿಗಳಾಶ್ರಮವೇಕೆ
ವ್ರತ-ಕೃಚ್ಛ್ರ ನೇಮ-ನಿಷ್ಠೆಗಳೇತಕೆ
ಪೃಥಿವಿಯೊಳಗೆ ನಮ್ಮ ಪುರಂದರ ವಿಠಲನ
ಅತಿ ಭಕುತಿಯಿಂದೊಮ್ಮೆ ನೆನೆದರೆ ಸಾಲದೆ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಉಪವಾಸ, ಜಪ ತಪ, ತೀರ್ಥಯಾತ್ರೆ, ದೇವರ ಪೂಜೆಗೆ ನೀರ ಕಾವಡಿ ಹೊರುವ ನೇಮ, ಆಶ್ರಮವಾಸ, ಕೃಚ್ಛ್ರಾದಿ ತಪಸ್ಸಿನ ಆಚರಣೆ – ಇಂಥ ಸುತ್ತು ಬಳಸು ದಾರಿಯಲ್ಲಿ ತೊಳಲಾಡುವುದರ ಬದಲು ದೈವವನ್ನು ನಂಬಿ ಏಕೆ ನಡೆದುಕೊಳ್ಳಬಾರದು ಎಂದು ದಾಸರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಶ್ರೀಹರಿಯ ಉತ್ಕಟ ಭಕ್ತಿಯೊಂದಿದ್ದರೆ ಮಿಕ್ಕ ಯಾವ ಸಾಂಪ್ರದಾಯಿಕ ಆಚಾರ-ವಿಚಾರಗಳೂ ಬೇಕಿಲ್ಲವೆಂಬುದನ್ನು ದಾಸರು ಈ ಹಾಡಿನಲ್ಲಿ ಹೇಳಿದ್ದಾರೆ.

**ಕೃಚ್ಛ್ರ** = ದೇಹ ದಂಡನೆಯ ವ್ರತ

**ಕಾವಡಿ** – ಹೆಗಲ ಮೇಲೆ ಹೊರುವ ಅಡ್ಡೆ.

**ಕೃಚ್ಛ್ರ ವ್ರತ** – ಸಾಂತಪನಾದಿ ವ್ರತ, ದೇಹವನ್ನು ಸೊರಗಿಸುವ ಕಠಿಣ ವ್ರತಾಚರಣೆ.

**Classification:** Keerthane
**Ankita:** Purandara Vittala
**Location:** NA
**Category:** bhakti, Vishnu stuti, loka neeti
**Group Words:** Narayana, nalige, mullu, kashi, niru, ooru, Krishna, dari, upavasa, vrata, gange, kai, japa, mukti, pati, patni, bhumi,
**Pravachana:** NA
**Explanation:** NA